# Key answer of Social Science question paper

## ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮಲ್ಲೇಶ್ವರಂ, ಬೆಂಗಳೂರು-560003.

## KARNATAKA SECONDARY EDUCATION EXAMINATION BOARD

**2021-22 MODEL QUESTION PAPER**

Subject : SOCIAL SCIENCE/ಸಮಾಜ ವಿಜ್ಞಾನ — Subject Code : 85K

Time : 3 hrs. 15 mins. — Max. Marks : 80

---

**I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8**

**1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು**

ಎ) ಡಾಲ್‌ಹೌಸಿ ಬಿ) ವೆಲ್ಲೆಸ್ಲಿ ಸಿ) ಕಾರ್ನ್‌ವ್ಯಾಲಿಸ್ ಡಿ) ವಿಲಿಯಂ ಬೆಂಟಿಂಕ್

**2. ಕಾನ್ಪುರದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದ ನಾಯಕ**

ಎ) ಮಂಗಲ್ ಪಾಂಡೆ ಬಿ) ದೋಂಡಿಯಾ ವಾಘ ಸಿ) ನಾನಾ ಸಾಹೇಬ ಡಿ) ಎರಡನೇ ಬಹದ್ದೂರ್ ಷಾ

**3. ಮಾನವ ಹಕ್ಕುಗಳ ದಿನವನ್ನು ಆಚರಿಸುವುದು**

ಎ) ಡಿಸೆಂಬರ್ 10ರಂದು ಬಿ) ಮಾರ್ಚ್ 15ರಂದು ಸಿ) ಜೂನ್ 6ರಂದು ಡಿ) ಜುಲೈ 11ರಂದು

**4. ಕೈಗಾ ಅಣು ಸ್ಥಾವರ ವಿರೋಧಿ ಚಳವಳಿಯ ನೇತೃತ್ವ ವಹಿಸಿದ್ದವರು**

ಎ) ಡಾ. ಶಿವರಾಂ ಕಾರಂತ್ ಬಿ) ಸುಂದರಲಾಲ್ ಬಹುಗುಣ ಸಿ) ಕುಸುಮಾ ಸೊರಬ ಡಿ) ಪ್ರೊ.ಎಂ. ಡಿ. ನಂಜುಂಡಸ್ವಾಮಿ

**5. ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸಿದವರು**

ಎ) ಮಹಾತ್ಮ ಗಾಂಧಿ ಬಿ) ಬಾಲಗಂಗಾಧರ್ ತಿಲಕ್ ಸಿ) ಡಾ. ಬಿ.ಆರ್. ಅಂಬೇಡ್ಕರ್ ಡಿ) ಜ್ಯೋತಿಭಾ ಫುಲೆ

**6. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಸ್ಥಳ**

ಎ) ರೂಯ್ಲಿ ಬಿ) ಮಾಸಿನ್‌ರಾಮ್ ಸಿ) ಆಗುಂಬೆ ಡಿ) ಕುದುರೆಮುಖ

**7. ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ ಎಂದು ಹೇಳಿದವರು**

ಎ) ಡಾ. ಬಿ.ಆರ್. ಅಂಬೇಡ್ಕರ್ ಬಿ) ಜವಾಹರ್ ಲಾಲ್ ನೆಹರು ಸಿ) ಅಮರ್ತ್ಯ ಸೇನ್ ಡಿ) ಮಹಾತ್ಮ ಗಾಂಧಿ

8. ವಿಪ್ರೋ ಸಂಸ್ಥೆಯ ಸಂಸ್ಥಾಪಕರು

ಎ) ಅಜಿಮ್ ಪ್ರೇಮ್‌ಜಿ ಬಿ) ನಾರಾಯಣಮೂರ್ತಿ ಸಿ) ಡಾ. ಪ್ರತಾಪ್ ರೆಡ್ಡಿ ಡಿ) ಕಿರಣ್ ಮಜುಮ್‌ದಾರ್ ಷಾ

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1=8**

**9. ಎರಡನೆಯ ಷಾ ಆಲಂನು ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ನೀಡಿದ್ದರಿಂದಾದ ಪರಿಣಾಮವೇನು?**

ಉತ್ತರ: ಎರಡನೆ ಷಾ ಆಲಂ ಬ್ರಿಟೀಷರಿಗೆ ಕೋರಾ ಮತ್ತು ಅಲಹಾಬಾದ ನೀಡಿದ್ದರಿಂದ ಮರಾಠರಿಗೂ ಬ್ರಿಟೀಷರಿಗೂ ವೈರತ್ವ ಉಂಟಾಯಿತು. ಮೊದಲನೆ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣವಾಯಿತು.

**10. ವರ್ನ್ಯಾಕುಲರ್ ಪ್ರೆಸ್ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು?**

ಉತ್ತರ: ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ವರ್ನ್ಯಾಕುಲರ್ ಪ್ರೆಸ್ ಕಾಯ್ದೆಯನ್ನು ಜಾರಿಗೊಳಿಸಲಾಯಿತು.

**11. ನಿಶಸ್ತ್ರೀಕರಣ ಎಂದರೇನು?**

ಉತ್ತರ: ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವದೇ ನಿಶ್ಯಸ್ತ್ರೀಕರಣ.

**12. ಸಾಮಾಜಿಕ ಭದ್ರತೆ ಏನನ್ನು ಒಳಗೊಂಡಿದೆ?**

ಉತ್ತರ: ಮಾನವನಿಗೆ ಬದುಕಲು ಬೇಕಾದ ಅಗತ್ಯ ಮೂಲ ಸೌಲಭ್ಯಗಳಾದ ವಸತಿ, ಆರೋಗ್ಯ, ಆಹಾರ, ನೀರು ಮತ್ತು ಸಮಾನತೆ ಒದಗಿಸುವದೇ ಸಾಮಾಜಿಕ ಭದ್ರತೆ.

**13. ಮಾವಿನ ಹೂಯ್ಲು ಎಂದರೇನು?**

ಉತ್ತರ: ಕೇರಳದಲ್ಲಿ ಎಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಬೀಳುವ ಪೂರ್ವ ಮಾನ್ಸೂನ್ ಮಳೆಯನ್ನು ಮಾವಿನ ಹೊಯ್ಲು ಎನ್ನುವರು.

**14. ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?**

ಉತ್ತರ: ಗ್ರ್ಯಾನೈಟ್, ನೀಸ್ ಮತ್ತು ಸ್ಫಟಿಕ ಶಿಲೆಗಳ ಶಿಥಲೀಕರಣದಿಂದ ಕೆಂಪು ಮಣ್ಣು ಉತ್ಪತ್ತಿಯಾಗಿದೆ.

**15. ಅಧಿಕಾರ ವಿಕೇಂದ್ರೀಕರಣ ಎಂದರೇನು?**

ಉತ್ತರ: ಪ್ರತಿಯೊಂದು ಗ್ರಾಮದ ಆಡಳಿತದ ಅಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವದನ್ನು ವಿಕೇಂದ್ರೀಕರಣ ಎನ್ನುವರು.

**16. ಬಿಳಿ ಕ್ರಾಂತಿಯ ಪಿತಾಮಹ ಯಾರು?**

ಉತ್ತರ: ಬಿಳಿ ಕ್ರಾಂತಿಯ ಪಿತಾಮಹ ವರ್ಗೀಸ್ ಕುರಿಯನ್.

**III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17. ಕಾನ್‌ಸ್ಟಾಂಟಿನೋಪಲ್ ನಗರದ ವಶವು ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯುವಂತಾಯಿತು. ಸಮರ್ಥಿಸಿ.**

ಉತ್ತರ: 1453 ರಲ್ಲಿ ಕಾನಸ್ಟಂಟಿನೋಪಲ್ ನಗರದ ಪತನದಿಂದ ಏಷ್ಯಾ ಮತ್ತು ಯುರೋಪ್ ನಡುವಿನ ಭೂ ಮಾರ್ಗ ಮುಚ್ಚಿ ಹೋಯಿತು. ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಟರ್ಕರು ಈ ಮಾರ್ಗದ ಮೂಲಕ ಹಾದು ಹೋಗುವ ವಸ್ತುಗಳಿಗೆ ವಿಪರೀತ ಸುಂಕ ಹೇರಿದರು. ಇಟಲಿಯ ವರ್ತಕರಿಗೆ ಈ ಮಾರ್ಗದ ವ್ಯಾಪಾರ ಲಾಭದಾಯಕವಾಗಿ ಪರಿಣಮಿಸಲಿಲ.

**18. ಜುನಾಘಡವು ಭಾರತದ ಒಕ್ಕೂಟದಲ್ಲಿ ಹೇಗೆ ಸೇರ್ಪಡೆಯಾಯಿತು?**

ಉತ್ತರ: ಜುನಾಗಡ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದನು. ಜುನಾಗಡದ ಜನರು ಅವನ ವಿರುದ್ಧ ಬೀದಿಗಿಳಿದರು. ನವಾಬನು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು. ಅಲ್ಲಿಯ ದಿವಾನನ ಮನವಿ ಆಧರಿಸಿ ಜುನಾಗಡವನ್ನು ಭಾರತಕ್ಕೆ ಸೇರಿಸಲಾಯಿತು.

**19. ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?**

ಉತ್ತರ: ಭಾರತದ ವಿದೇಶಾಂಗ ನೀತಿಯ ಗುರಿಗಳು: 1. ರಾಷ್ಟ್ರದ ಭದ್ರತೆ. 2. ರಾಷ್ಟ್ರದ ಆರ್ಥಿಕ ಸಂವರ್ಧನೆ 3. ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶಗಳಿಗೆ ವಿಸ್ತರಿಸುವದು. 4. ಶತ್ರು ರಾಷ್ಟ್ರಗಳನ್ನು ಹತ್ತಿಕ್ಕುವದು, ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಳ್ಳುವದು. 5 ವಿಶ್ವಶಾಂತಿ ಹಾಗೂ ಸಹಬಾಳೆಯನ್ನು ಸಾಧಿಸುವದು.

ಅಥವಾ

**ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**

ಉತ್ತರ: ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು: 1. ಮಾನವ ಹಕ್ಕುಗಳ ನಿರಾಕರಣೆ 2. ಶಸ್ತ್ರಾಸ್ತ್ರಗಳ ಪೈಪೋಟಿ 3. ಆರ್ಥಿಕ ಅಸಮಾನತೆ 4. ವರ್ಣಬೇದ ನೀತಿ 5. ಭಯೋತ್ಪಾದಕತೆ.

**20. ನರ್ಮದಾ ಬಚಾವೋ ಆಂದೋಲನವನ್ನು ಏಕೆ ಆರಂಭಿಸಲಾಯಿತು?**

ಉತ್ತರ: ನರ್ಮದಾ ನದಿಗೆ ಆಣೆಕಟ್ಟು ಕಟ್ಟುವದರಿಂದ ಸ್ಥಳೀಯ ಹಾಗೂ ಬುಡಕಟ್ಟು ಜನರು ನಿರ್ಗತಿಕರಾಗುತ್ತಿದ್ದರು. ಅರಣ್ಯ ನಾಶ ಜೀವ ಸಂಕುಲಕ್ಕೆ ತೊಂದರೆ ಆಗುತ್ತಿತ್ತು. ಆದ್ದರಿಂದ ನರ್ಮದಾ ಬಚಾವೋ ಆಂದೋಲನವನ್ನು ಆರಂಭಿಸಲಾಯಿತು.

ಅಥವಾ

**ಆರ್ಥಿಕ ಶ್ರಮವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆಯನ್ನು ವ್ಯತ್ಯಯಿಸಿ.**

ಉತ್ತರ: ಆರ್ಥಿಕ ಶ್ರಮ ವಿಭಜನೆಯು ತಾಂತ್ರಿಕ ಅಂಶಗಳ ಜೊತೆಗೆ ಕಾರ್ಮಿಕರ ಸಹಕಾರದಿಂದ ಹೆಚ್ಚಾಗಿ ನಡೆಯುತ್ತದೆ. ಆದರೆ ಸಾಮಾಜಿಕ ಶ್ರಮ ವಿಭಜನೆಯು ವರ್ಗ, ಸ್ಥಾನ, ಮತ್ತು ಏಣಿ ಶ್ರೇಣಿಯ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತದೆ.

**21. ಪರ್ಯಾಯ ಪ್ರಸ್ಥಭೂಮಿಯು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೇಗೆ?**

ಉತ್ತರ: ಪರ್ಯಾಯ ಪ್ರಸ್ಥ ಭೂಮಿಯ ಆರ್ಥಿಕ ಪ್ರಾಮುಖ್ಯತೆ: 1. ಅಪಾರ ಖನಿಜ ಸಂಪನ್ಮೂಲಗಳನ್ನು ಹೊಂದಿದೆ. 2. ನದಿಗಳು ಜಲಪಾತಗಳನ್ನು ಹೊಂದಿರುವದರಿಂದ ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಸಹಾಯಕವಾಗಿವೆ. 3. ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಸಹಾಯಕವಾಗಿವೆ. 4. ಗಿರಿಧಾಮಗಳನ್ನು ಹೊಂದಿವೆ.

**22. ಅರಣ್ಯನಾಶಕ್ಕೆ ಕಾರಣಗಳನ್ನು ಪಟ್ಟಿ ಮಾಡಿ.**

ಉತ್ತರ: ಅರಣ್ಯ ನಾಶಕ್ಕೆ ಕಾರಣಗಳು: 1. ಕೃಷಿ ಕ್ಷೇತ್ರದ ವಿಸ್ತರಣೆ 2. ರಸ್ತೆ, ರೈಲು ಮಾರ್ಗಗಳ ನಿರ್ಮಾಣ 3. ಕೈಗಾರಿಕೀಕರಣ 4. ನಗರೀಕರಣ 5. ಅತಿಯಾಗಿ ಮೇಯಿಸುವಿಕೆ 6. ಕಾಡ್ಗಿಚ್ಚು

**23. ದೇಶದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ರಾಷ್ಟ್ರೀಯ ವರಮಾನವು ಸೂಕ್ತವಾದುದಲ್ಲ. ಏಕೆ?**

ಉತ್ತರ: ದೇಶದ ಆರ್ಥಿಕ ಅಭಿವೃದ್ದ್ಧಿಯನ್ನು ಅಳೆಯಲು ರಾಷ್ಟ್ರೀಯ ವರಮಾನ ಸೂಕ್ತವಾದುದಲ್ಲ, ಏಕೆಂದರೆ ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆ ಹೆಚ್ಚಳವೂ ಕಂಡುಬಂದರೆ, ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವದಿಲ್ಲ. ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧ್ಧಿಯ ಹೋಲಿಕೆ ಮಾಡುವದಕ್ಕೆ ರಾಷ್ಟ್ರೀಯ ವರಮಾನ ಸೂಕ್ತವಾದುದಲ.

**24. 1986ರ ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳು ಯಾವುವು?**

ಉತ್ತರ: 1986 ರ ಗ್ರಾಹಕ ಸಂರಕ್ಷಣಾ ಕಾಯ್ದ್ದೆಯ ಉದ್ದೇಶಗಳು: 1. ವಸ್ತುಗಳ ಸುರಕ್ಷತೆ, ಮತ್ತು ಗುಣಮಟ್ಟಕ್ಕೆ ಪ್ರಾಶಸ್ತ್ಯ ನೀಡುವದು. 2. ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟ ತಪ್ಪಿಸುವದು, 3. ಮಾರುಕಟ್ಟೆ ಯಲ್ಲಿ ಅನುಚಿತ ವ್ಯವಹಾರ ಪದ್ಧ ತಿಗಳನ್ನು ತಡೆಗಟ್ಟುವದು. 4. ಗುಣಮಟ್ಟ, ಅಳತೆ, ತೂಕ ಬೆಲೆಗಳ ಮೇಲೆ ನಿಗಾ ವಹಿಸುವದು.5. ಬಳಕೆದಾರರಿಗೆ ತೊಂದರೆ ಆದರೆ ಪರಿಹಾರ ಒದಗಿಸುವದು 6. ಗ್ರಾಹಕ ಶಿಕ್ಷಣ ನೀಡುವದು.

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ಅಂಶಗಳಲ್ಲಿ/ವಾಕ್ಯಗಳಲ್ಲಿ ಉತ್ತರಿಸಿ. 9x3=27**

**25. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ.**

ಉತ್ತರ: ಭಾರತದಲ್ಲಿ ಬ್ರಿಟೀಷ್ ಶಿಕ್ಷಣದ ಪರಿಣಾಮಗಳು: ಭಾರತೀಯರು ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮಗಳನ್ನು ಬೆಳೆಸಿಕೊಂಡರು. ಸ್ಥಳೀಯ ಭಾಷೆ, ಸಾಹಿತ್ಯ ಬೆಳೆದವು. ವೃತ್ತ ಪತ್ರಿಕೆಗಳು ಬೆಳೆದವು. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು ಹುಟಿ ್ಟ ಕೊಂಡವು. ರೂಸೋ, ಮಿಲ್, ಚಿಂತನೆಗಳು ಬಾರತೀಯರ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲಿ ನಾವೀನ್ಯತೆ ತಂದವು. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗಳ ಪ್ರಭಾವ ಭಾರತೀಯರ ಮೇಲೆ ಆಯಿತು. ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆ ಅರಿತುಕೊಳ್ಳಲು ಸಾಧ್ಯವಾಯಿತು.

**26. 3ನೇ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳೇನು?**

ಉತ್ತರ: 3ನೆಯ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳು ಶ್ರೀರಂಗಪಟ್ಟಣ ಒಪ್ಪಂದವು ಅಸಮಾನ ಶರತ್ತುಗಳನ್ನು ಹೊಂದಿತ್ತು. ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟು ಕೊಡುವದು. ಮೂರು ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಕೊಡುವದು. ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ಇಡುವದು; ಸೆರೆ ಹಿಡಿದ ಸೈನಿಕರನ್ನು ಬಿಡುಗಡೆಗೊಳಿಸುವದು.

ಅಥವಾ

**ಅಸಹಕಾರ ಚಳವಳಿಯ ಪ್ರಮುಖ ಕಾರ್ಯಕ್ರಮಗಳಾವುವು?**

ಉತ್ತರ: ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳು ಶಾಲಾಕಾಲೇಜುಗಳು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವದು. ಪ್ರಾಂತೀಯ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳನ್ನು ಬಹಿಷ್ಕರಿಸುವದು. ಬ್ರಿಟೀಷರು ನೀಡಿದ ಪದವಿ ಮತ್ತು ಸ್ಥಾನಗಳನ್ನು ವಾಪಾಸ್ ಮಾಡುವದು ಸ್ಥಳೀಯ ಸಭೆಗಳ ನಾಮ ನಿರ್ದೇಶನ ಸದಸ್ಯರು ರಾಜೀನಾಮೆ ನೀಡುವದು. ಸರ್ಕಾರಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವದು.

**27. ಬ್ರಹ್ಮಸಮಾಜದ ಬೋಧನೆಗಳಾವುವು?**

ಉತ್ತರ: ಬ್ರಹ್ಮ ಸಮಾಜದ ಬೋಧನೆಗಳು: ಏಕ ದೇವತಾರಾಧನೆಯ ಪ್ರತಿಪಾದನ್ ಅರ್ಥಹೀನ ಆಚರಣೆಗಳ ವಿರೋಧ ಪ್ರತಿಯೊಬ್ಬ ವ್ಯಕ್ತಿ ಘನತೆಯಿಂದ ಬಾಳಬೇಕು. ಬಹುಪತ್ನಿತ್ವ, ಬಾಲ್ಯ ವಿವಾಹಕ್ಕೆ ವಿರೋಧ. ವಿದವೆಯರಿಗೆ ಆಸ್ತಿಯಲ್ಲಿ ಪಾಲು. ಇಂಗ್ಲೀಷ ಶಿಕ್ಷಣಕ್ಕೆ ಒತ್ತು.

**28. ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧವನ್ನು ವಿವರಿಸಿ.**

ಉತ್ತರ: ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧ: ಭಾರತ ಮತ್ತು ರಷ್ಯಾ ಉತ್ತಮ ಸಂಬಂಧ ಹೊಂದಿವೆ. 1962 ರ ಚೀನಾ ದಾಳಿಯನ್ನು ರಷ್ಯಾ ಖಂಡಿಸಿತ್ತು. 1961 ರ ಗೋವಾ ವಿಮೋಚನಾ ಸಂದರ್ಭದಲ್ಲಿ ರಷ್ಯಾ ಬೆಂಬಲಿಸಿತ್ತು. 1966 ರಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮದ್ಯ ತಾಷ್ಕೆಂಟ ಒಪ್ಪಂದಕ್ಕೆ ಸಹಕರಿಸಿತು. 1971 ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು. ಭಾರತದ ಭಿಲಾಯಿ, ಬೊಕಾರೊ ಉಕ್ಕಿನ ಕಾರ್ಖಾನೆಗಳಿಗೆ ರಷ್ಯಾ ಸಹಕರಿಸಿಯು. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಖಾಯಂ ಸದಸ್ಯತ್ವಕ್ಕೆ ರಷ್ಯಾ ಬೆಂಬಲ ನೀಡುತ್ತಿದೆ.

**29. ಅಸ್ಪೃಶ್ಯತೆಯ ನಿವಾರಣೆಗಾಗಿ ಕೈಗೊಂಡಿರುವ ಕಾನೂನು ಕ್ರಮಗಳನ್ನು ವಿವರಿಸಿ.**

ಉತ್ತರ: ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡಿರುವ ಕಾನೂನು ಕ್ರಮಗಳು: ಸಂವಿಧಾನದ 17 ನೆಯ ವಿಧಿ ಅಸ್ಪೃಶ್ಯತೆ ಆಛರಣೆ ನಿಷೇಧಿಸಿದೆ. 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದ್ದೆ ಜಾರಿಗೆ ತರಲಾಗಿದೆ. 1976 ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದ್ದೆ ಜಾರಿಗೆ ತರಲಾಗಿದೆ. ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕು ನೀಡಲಾಗಿದೆ. ಪ.ಜಾತಿ, ಪ, ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಿದೆ. 1989 ರಲ್ಲಿ ಅಸ್ಪೃಶ್ಯತೆ ನಿರ್ಮೂಲನೆ ಜವಾಬ್ದಾರಿಗಳನ್ನು ರಾಜ್ಯ ಸರಕಾರಕ್ಕೆ ವಹಿಸಿದೆ.

**30. ಕೈಗಾರಿಕೆಗಳು ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಸ್ಥಾನಿಕರಣಗೊಂಡಿವೆ. ಏಕೆ?**

ಉತ್ತರ: ಕೈಗಾರಿಕೆಗಳು ಕೆಲವೊಂದು ಪ್ರದೇಶದಲ್ಲಿ ಮಾತ್ರ ಸ್ಥನಿಕರಣಗೊಂಡಿವೆ. ಏಕೆಂದರೆ, ಅಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳ ಸರಬರಾಜು, ಶಕ್ತಿ ಸಂಪನ್ಮೂಲಗಳ ಪೂರೈಕೆ ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ, ಮಾರುಕಟ್ಟೆ ಸೌಲಭ್ಯ, ಬಂಡವಾಳ, ಕಾರ್ಮಿಕರು ಮತ್ತು ನೀರು ಪೂರೈಕೆ ಸೂಕ್ತ ವಾಯುಗುಣ ಸರಕಾರದ ನೀತಿ ನಿಯಮಗಳು,

**31. ಭೂಕುಸಿತದ ಪರಿಣಾಮಗಳನ್ನು ವಿವರಿಸಿ.**

ಉತ್ತರ: ಭೂಕುಸಿತದ ಪರಿಣಾಮಗಳು: ರೈಲುಮಾರ್ಗ, ರಸ್ತೆಗಳಿಗೆ ಹಾನಿ. ಜನವಸತಿ ಮತ್ತು ಸಸ್ಯವರ್ಗಗಳು ಭೂಗತವಾಗುವವು. ಸಾವು ನೋವು ಉಂಟಾಗುವದು. ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ.

ಅಥವಾ

**ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.**

ಉತ್ತರ: ಸಾರಿಗೆಯ ಪ್ರಾಮುಖ್ಯತೆ: ಕೃಷಿಯ ಅಭಿವೃದ್ಧಿಗೆ ನೆರವಾಗುತ್ತದೆ, ಕೈಗಾರಿಕೆಯ ಅಭಿವೃದ್ಧಿಗೆ ಸಹಕಾರಿ, ಮಾರುಕಟ್ಟೆಗಳ ವಿಸ್ತರಣೆ ಆಗುತ್ತದೆ. ದೇಶೀಯ ಮತ್ತು ವಿದೇಶೀಯ ವ್ಯಾಪಾರದ ಅಭಿವೃದ್ಧಿ ಆಗುತ್ತದೆ. ಉದ್ಯೋಗ ಸೃಷ್ಠಿಗೆ ಸಹಾಯಕ. ಆದಾಯ ಮತ್ತು ಜೀವನ ಮಟ್ಟದ ಸುಧಾರಣೆ. ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ. ರಕ್ಷಣಾ ಪಡೆಗೆ ಸಹಾಯಕ.

**32. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.**

ಉತ್ತರ: ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು: ಗ್ರಾಮ ಪಂಚಾಯತ, ತಾಲೂಕಾ ಪಂಚಾಯತ, ಜಿಲ್ಲಾ ಪಂಚಾಯತ ಉಳ್ಳ ಮೂರು ಹಂತದ ಪಂಚಾಯತಿ ವ್ಯವಸ್ಥೆ. ನೇರ ಹಾಗೂ ನಿಯಮಿತ ಚುನಾವಣೆಗಳು. ಪ, ಜಾತಿ ಪ, ವರ್ಗ, ಹಿಂದುಳಿದ ವರ್ಗ, ಮಹಿಳೆಯರಿಗೆ ಸಾಥ್ನ ಮೀಸಲಾತಿ. ಹಣಕಾಸು, ಆಡಳಿತ, ಮುಂಗಡಪತ್ರ ಮಂಡಿಸುವ ಜವಾಬ್ದಾರಿ. ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ. ಪಂಚಾಯತಿ ವಿಸರ್ಜನೆಗೆ ಕಟ್ಟುನಿಟ್ಟಿನ ನಿಯಮಗಳು.

ಅಥವಾ

**ಆರ್ಥಿಕ ಅಭಿವೃದ್ಧಿಯ ಉದ್ದೇಶಗಳನ್ನು ತಿಳಿಸಿ.**

ಉತ್ತರ: ಆರ್ಥಿಕ ಅಭಿವೃದ್ಧಿಯ ಉದ್ದೇಶಗಳು: ವರಮಾನದ ಹೆಚ್ಚಳ. ಬಡತನದಲ್ಲಿ ಇಳಿಕೆ. ನಿರುದ್ಯೋಗದಲ್ಲಿ ಇಳಿಕೆ. ಅಸಮಾನತೆಯಲ್ಲಿ ಇಳಿಕೆ. ಪರಿಸರ ಸಂರಕ್ಷಣೆ.

**33. ಬ್ಯಾಂಕಿನ ಕಾರ್ಯಗಳು ಯಾವವು?**

ಉತ್ತರ: ಬ್ಯಾಂಕಿನ ಕಾರ್ಯಗಳು: ಸಾರ್ವಜನಿಕರು ಮತ್ತು ಇತರರಿಂದ ಠೇವಣಿ ಅಂಗೀಕರಿಸುವದು. ಸಾರ್ವಜನಿಕರು ಮತ್ತು ಇತರರಿಗೆ ಸಾಲಗಳನ್ನು ನೀಡುವದು. ಹಣವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸುವದು. ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲಿ ಮಾಡುವದು. ಹುಂಡಿಗಳನ್ನು ಸೋಡಿ ಮಾಡುವದು, ಭದ್ರತಾ ಕಪಾಟುಗಳನ್ನು ಬಾಡಿಗೆ ಕೊಡುವದು. ವಿದೇಶೀ ವಿನಿಮಯ ವ್ಯವಹಾರಗಳನ್ನು ನಿರ್ವಹಿಸುವದು. ಬೆಲೆ ಬಾಳುವ ವಸ್ತುಗಳನ್ನು ತನ್ನ ಸುಪರ್ದಿಯಲ್ಲಿ ಇಟ್ಟು ಕೊಳ್ಳುವದು. ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವದು. ಸರಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವದು.

ಅಥವಾ

**ಉದ್ಯಮಿಯ ಕಾರ್ಯಗಳು ಯಾವುವು?**

ಉತ್ತರ: ಉದ್ಯಮಿಯ ಕಾರ್ಯಗಳು: ಯೋಜನೆಗಳನ್ನು ಮಾಡುವದು, ಉತ್ಪಾದನಾಂಗಗಳನ್ನು ಸಂಯೋಜಿಸುವದು. ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ, ಮಾರುಕಟ್ಟೆ, ಉದ್ಯೋಗಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ. ಎಲ್ಲ ಅಂಶಗಳ ಬಗ್ಗೆ ಸಮಂಜಸ ಸಂಯೋಜನೆ ಮಾಡುತ್ತಾನೆ. ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ. ಹಣಕಾಸಿನ ಆಯ ವ್ಯವ ನಿಭಾಯಿಸುತ್ತಾನೆ. ಕಷ್ಟ ನಷ್ಟ ಅನಿಶ್ಚಿತತೆ, ಎದುರಿಸುತ್ತಾನೆ. ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಮಾರ್ಗದರ್ಶನ ಮಾಡುತ್ತಾನೆ.

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಸುಮಾರು ಎಂಟು ವಾಕ್ಯಗಳಲ್ಲಿ ಉತ್ತರಿಸಿ. 4x4=16**

**34. ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಸುಭಾಷ್ ಚಂದ್ರ ಬೋಸ್ ಅವರು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದರು?**

ಉತ್ತರ: ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ ಚಂದ್ರ ಬೋಸ್‌ರು ಹೋರಾಡಿದ ಬಗೆ: ಐ, ಸಿ, ಎಸ ಪರೀಕ್ಷೆಯಲ್ಲಿ ರ್‍ಯಾಂಕ ಗಳಿಸಿದ್ದರೂ, ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ನೇತಾಜಿ ಎಂದು ಜನಪ್ರಿಯರಾದರು. ಕಾಂಗ್ರೆಸ ಸಮಾಜವಾದಿ ಪಕ್ಷ ಸ್ಥಾಪಿಸಿದರು. ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಫಾರ್ವರ್ಡ ಬ್ಲಾಕ್ ಎಂಬ ಹೊಸ ಪಕ್ಷ ಕಟ್ಟಿದರು. ಜರ್ಮನಿಯಲ್ಲಿ ಯುದ್ಧ ಖೈದಿಗಳನ್ನು ಸಂಘಟಿಸಿದರು. ಅಜಾದ್ ಹಿಂದ್ ರೇಡಿಯೋದ ಮೂಲಕ ತಮ್ಮ ಭಾಷಣಗಳನ್ನು ಪ್ರಸಾರ ಮಾಡಿದರು. ಐ, ಎನ್,ಎ ದ ನೇತೃತ್ವ ವಹಿಸಿದ್ದರು. ದೆಹಲಿ ಚಲೋ ಗೆ ಕರೆ ನೀಡಿದರು. "ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ" ಎಂದು ಕರೆಯಿತ್ತರು.

**35. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.**

ಉತ್ತರ: ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರ: ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಆರಂಭಿಕ ಇಪ್ಪತ್ತು ವರ್ಷಗಳನ್ನು ಮಂದಗಾಮಿ ಯುಗ ಎಂದು ಕರೆಯಲಾಗಿದೆ. ಅಹಿಂಸಾತ್ಮಕ ಕ್ರಮಗಳ ಮೂಲಕ ಸ್ವಾತಂತ್ರ್ಯ ಪಡೆಯಲು ಇವರು ಬಯಸಿದರು, ಡಬ್ಲ್ಯೂ.ಸಿ ಬ್ಯಾನರ್ಜಿ, ಎಂ.ಜಿ, ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಭಾಯಿ ನವರೋಜಿ, ಗೋಪಾಲ ಕೃಷ್ಣ ಗೋಖಲೆ ಪ್ರಮುಖರಾಗಿದ್ದಾರೆ. ಇವರು ಬ್ರಿಟಿಷ್ ಆಳ್ವಿಕೆ ನ್ಯಾಯ ಪರತೆಯಲ್ಲಿ ನಂಬಿಕೆ ಇಟ್ಟಿದ್ದರು. ಪ್ರಾರ್ಥನೆ ಮತ್ತು ಮನವಿ ನೀಡುತ್ತಿದ್ದರು. ಜನರಲ್ಲಿ ರಾಜಕೀಯ ಎಚ್ಚರ ತರುವ ಪ್ರಯತ್ನ ಮಾಡಿದರು, ದೇಶದ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತಾಯಿಸಿದರು. ಸೈನಿಕ ವಚ್ಚ ಕಡಿಮೆ ಮಾಡುವದು, ಉತ್ತಮ ಶಿಕ್ಷಣ ನೀಡುವದು, ಬಡತನದ ಬಗ್ಗೆ ಅದ್ಯಯನ ಮಾಡಲು ಒತ್ತಾಯಿಸಿದರು. ಸಂಪತ್ತಿನ ಪ್ರವಾಹದ ಸಿದಾಂತ ಮಂಡಿಸಿದರು.

ಅಥವಾ

**1857ರ ಕ್ರಾಂತಿಗೆ ಕಾರಣವಾದ ಅಂಶಗಳನ್ನು ವಿವರಿಸಿ.**

ಉತ್ತರ: ರಾಜಕೀಯ ಕಾರಣಗಳು: 1. ಡಾಲ್ ಹೌಸಿ ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಭಾರತೀಯ ರಾಜ್ಯಗಳು ಬ್ರಿಟೀಷರ ವಶಕ್ಕೆ ಹೋದವು. 2. ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು. ಆರ್ಥಿಕ ಕಾರಣಗಳು: 1. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದ ಭಾರತದ ಗೃಹ ಕೈಗಾರಿಕೆಗಳು ನಾಶವಾದವು. 2. ಜಮೀನ್ದಾರು ರೈತರನ್ನು ಶೋಷಿಸಿದರು. ಆಡಳಿತಾತ್ಮಕ ಕಾರಣಗಳು: 1. ಇಂಗ್ಲಿಷರು ಜಾರಿಗೆ ತಂದ ಹೊಸ ಕಾನೂನುಗಳು ಭಾರತೀಯರಿಗೆ ಅರ್ಥವಾಗಲಿಲ್ಲ. 2. ಇಂಗ್ಲಿಷರು ಆಂಗ್ಲ ಭಾಷೆಯನ್ನು ನ್ಯಾಯಾಲಯದ ಭಾಷೆಯಾಗಿ ಮಾಡಿದರು. ಸೈನಿಕ ಕಾರಣಗಳು: 1. ಆಂಗ್ಲ ಸೈನಿಕರಿಗಿದ್ದ ಬಡ್ತಿ, ಸ್ಥಾನಮಾನಗಳು ಭಾರತೀಯ ಸೈನಿಕರಿಗಿರಲಿಲ್ಲ. 2. ಭಾರತೀಯ ಸೈನಿಕರಿಗೆ ಸಾಗರದಾಟಿ ಸೇವೆ ಸಲ್ಲಿಸಲು ಒತ್ತಾಯಿಸಲಾಯಿತು.

**36. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು?**


ಉತ್ತರ: ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡಿರುವ ಕ್ರಮಗಳು: 1. ಬಾಲ್ಯ ವಿವಾಹ ನಿಷೇಧ ಕಾಯ್ದೆ, 2. ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೊಳಿಸಲಾಗಿದೆ. 3. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಥಾಪಿಸಿದೆ. 4. ಮಹಿಳಾ ಆಯೋಗಗಳ ರಚನೆ. 5. ಮಹಿಳಾ ಶಿಕಣಕ್ಕೆ ಆದ್ಯತೆ. 6. ಸ್ತ್ರಿ ಶಕ್ತಿ ಕಾರ್ಯಕ್ರಮ ಜಾರಿಗೆ ತರಲಾಗಿದೆ. 7. ಉದ್ಯೋಗ ಮತ್ತು ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿದೆ.

**37. ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಬಗೆಯ ಕೃಷಿ ವಿಧಾನಗಳನ್ನು ಪಟ್ಟಿ ಮಾಡಿ.**

ಉತ್ತರ: ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಬಗೆಯ ಕೃಷಿ ವಿಧಾನಗಳು: 1. ಜೀವನಾಧಾರಿತ ಬೇಸಾಯ; ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ವಿಧಾನ. 2. ವರ್ಗಾವಣೆ ಬೇಸಾಯ; ಮಣ್ಣಿನ ಫಲವತ್ತತೆ ನಾಶವಾದ ನಂತರ ಬೇರೆಡೆಗೆ ಹೋಗಿ ಬೇಸಾಯ ಮಾಡುವದು. 3. ಸಾಂದ್ರ ಬೇಸಾಯ; ಚಿಕ್ಕ ಭೂ ಹಿಡುವಳಿಯಲ್ಲಿ ಅಧಿಕ ಬಂಢವಾಳ, ಕಾರ್ಮಿಕರನ್ನು ತೊಡಗಿಸುವ ಬೇಸಾಯ. 4. ವಾಣಿಜ್ಯ ಬೇಸಾಯ; ವ್ಯಾಪಾರದ ಉದೇಶಕ್ಕಾಗಿ ಬೆಳೆಗಳನ್ನು ಬೆಳೆಯುವದು. 5. ಮಿಶ್ರಣ ಬೇಸಾಯ;ಬೆಳೆ ಬೆಳೆಯುವದರ ಜೊತೆಗೆ ಪಶುಪಾಲನೆ ಇತ್ಯಾದಿ ಉಪ ಉದ್ಯೋಗಗಳನ್ನು ಮಾಡುವದು. 6. ನೆಡುತೋಪು ಬೇಸಾಯ; ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಒಂದು ಬೆಳೆ ಬೆಳೆಯುವದು. 7. ಒಣಬೇಸಾಯ;ಅತಿ ಕಡಿಮೆ ಮಳೆ ಬೀಳುವ ನೀರಾವರಿ ಸೌಲಭ್ಯ ಇಲ್ಲದ ಪ್ರದೇಶಗಳಲ್ಲಿ ಬೇಸಾಯ ಮಾಡುವದು. 8. ಆರ್ದ್ರ ಬೇಸಾಯ; ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿ ನೆರವಿಲ್ಲದೆ ಬೆಳೆಗಳನ್ನು ಬೆಳೆಯುವದು. 9. ನೀರಾವರಿ ಬೇಸಾಯ; ನೀರಾವರಿ ಸಹಾಯದಿಂದ ಬೆಳೆ ಬೆಳೆಯುವದು.

**V 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ: 4x1+1=5**

ಎ) 82 1/2' ಪೂರ್ವ ರೇಖಾಂಶ ಬಿ) ಭಾಕ್ರನಂಗಲ್ ನದಿ ಕಣಿವೆ ಯೋಜನೆ ● ಸಿ) ನರ್ಮದಾ ನದಿ ★ ಡಿ) ವಿಶಾಖಪಟ್ಟಣ ▲



**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ**

(ಪ್ರಶ್ನೆ ಸಂಖ್ಯೆ 38ರ ಬದಲಿಗೆ) * **ವಿವಿದೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳು ಯಾವುವು?**

Downloaded from scoringtarget.com

Click here for more notes of SSLC